# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1275 |
| ಸದಸ್ಯರ ಹೆಸರು | : | ಶ್ರೀ ಅಡಗೂರು ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 19.03.2025 |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು ಈಟಿಗಟ್ಟಿ ಗ್ರಾಮದಲ್ಲಿ ಕೈಗಾರಿಕೆಗಾಗಿ ಸ್ವಾಧೀನಪಡಿಸಿದ ಒಟ್ಟು ಕ್ಷೇತ್ರ 590.14ಕ್ಕೆ ಸಂಬಂಧಿಸಿದಂತೆ ಈಟಿಗಟ್ಟಿ ಗ್ರಾಮದ ಸ.ನಂ.10 ಕ್ಷೇತ್ರ 20 ಎಕರೆ 6 ಗುಂಟೆ ಪೈಕಿ, 9 ಎಕರೆ 39 ಗುಂಟೆ ಇದ್ದು, ಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)</td><td>ಧಾರವಾಡ ಜಿಲ್ಲೆ, ಧಾರವಾಡ ಮತ್ತು ಹುಬ್ಬಳ್ಳಿ ತಾಲ್ಲೂಕು ಈಟಿಗಟ್ಟಿ ಮತ್ತು ಗಾಮನಗಟ್ಟಿ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶದ ಸಲುವಾಗಿ 751-13 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ಯಿಂದ ಸ್ವಾಧೀನಪಡಿಸಲು ದಿನಾಂಕ:05.06.2009ರಂದು ಕೆಐಎಡಿ ಕಾಯ್ದೆ ಕಲಂ 3(1), 1(3) ಮತ್ತು 28(1) ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಈ ಪೈಕಿ ನಿಯಮಾನುಸಾರ ಕ್ರಮ ಕೈಗೊಂಡು ಅಂತಿಮವಾಗಿ 590-14 ಎಕರೆ ಜಮೀನಿಗೆ ದಿನಾಂಕ:19.02.2013 ರಂದು ಕಲಂ 28(4)ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆಯಲ್ಲಿ ಈಟಿಗಟ್ಟಿ ಗ್ರಾಮದ ರಿ.ಸ.ನಂ:10ರ ಕ್ಷೇತ್ರ 20 ಎಕರೆ 6 ಗುಂಟೆ ಪೈಕಿ 19 ಎಕರೆ 39 ಗುಂಟೆ ಜಮೀನು ಒಳಗೊಂಡಿರುತ್ತದೆ.</td></tr>
<tr><td>(ಆ)</td><td>ಈ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರವರು 4 ಎಕರೆ 39 ಗುಂಟೆ ಜಮೀನನ್ನು 04 ಜನ ಬೇರೆ ಬೇರೆ ಅನಧಿಕೃತ ಜನಗಳಿಗೆ ಉದ್ದೇಶಪೂರ್ವಕವಾಗಿ ಭೂ ಮಾಲೀಕರೆಂದು ವರದಿ ನೀಡಿರುವುದರಿಂದ, ಅದರ ಮೂಲ ಭೂ ಮಾಲೀಕರಿಗೆ ಅನ್ಯಾಯ ಮಾಡಿದ್ದು, ತದನಂತರ ಮೂಲ ಭೂ ಮಾಲೀಕರಿಗೆ ಭೂ ಮಾಲೀಕರೆಂದು ವರದಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ತೆಗೆದುಕೊಂಡ ಕ್ರಮಗಳೇನು;</td><td>ಈಟಿಗಟ್ಟಿ ಗ್ರಾಮದ ರಿ.ಸ.ನಂ:10ರ ಕ್ಷೇತ್ರ 20 ಎಕರೆ 6 ಗುಂಟೆ ಪೈಕಿ 19 ಎಕರೆ 39 ಗುಂಟೆ ಜಮೀನಿಗೆ ಈ ಕೆಳಕಂಡಂತೆ ಪರಿಹಾರ ಪಾವತಿಸಲಾಗಿದೆ.<br><br><table><tr><th>ಭೂಪರಿಹಾರ ಪಡೆದವರ ಹೆಸರು</th><th>ಕ್ಷೇತ್ರ (ಎ-ಗು-ಆ)</th></tr><tr><td>1. ಶ್ರೀಮತಿ ಬಸವ್ವ ನಿಂಗಪ್ಪ ಗಾಮನಗಟ್ಟಿ</td><td>05-00-00</td></tr><tr><td>2. ಶ್ರೀ ರಮೇಶ ತಂದೆ ಸಿದ್ದಪ್ಪ ಗುಳಗಣ್ಣವರ</td><td>05-00-00</td></tr><tr><td>3. ಶ್ರೀ ಬಸಪ್ಪ ಪೂಜಾರ, ರಾಯಪ್ಪ ಪೂಜಾರ ಹಾಗೂ ಮುದಕಪ್ಪ ಪೂಜಾರ</td><td>01-27-00</td></tr><tr><td>4. ಶ್ರೀ.ತುಕಾರಾಮ ಬಿ ಪೂಜಾರ, ಕರೆಪ್ಪ ಬಿ ಪೂಜಾರ, ರಾಮಪ್ಪ ಬಿ ಪೂಜಾರ ಹಾಗೂ ಫಕ್ಕೀರಪ್ಪ ಬಿ ಪೂಜಾರ</td><td>08-12-00</td></tr><tr><td>ಒಟ್ಟು ಕ್ಷೇತ್ರ</td><td>19-39-00</td></tr></table><br>ಶ್ರೀ ಕರೆಪ್ಪ ನಾಗಪ್ಪ ಪೂಜಾರ ಇವರ ಹೆಸರು ಸದರಿ ಪಹಣಿ ಪತ್ರಿಕೆಯ ಕಬ್ಜಾದಾರ ಕಾಲಂ.ನಲ್ಲಿ ಇರುವುದಿಲ್ಲ ಮತ್ತು ಅಂತಿಮ ಅಧಿಸೂಚನೆ ಕೆ.ಐ.ಎ.ಡಿ. ಕಾಯ್ದೆ 1966ರ ಕಲಂ.28(4)ರಲ್ಲಿ ದಾಖಲೆ ಇಲ್ಲದಿರುವುದು ಕಂಡುಬರುತ್ತದೆ.<br><br>ಸದರಿ ಜಮೀನಿಗೆ ಸಂಬಂಧಿಸಿದಂತೆ ಈಗಾಗಲೆ ಮಾನ್ಯ 4ನೇ ಹೆಚ್ಚುವರಿ ಹಿರಿಯ ನ್ಯಾಯಾಧೀಶರ ನ್ಯಾಯಾಲಯ ಜೆಎಮ್.ಎಫ್‌ಸಿ ಧಾರವಾಡ ಇವರಲ್ಲಿ ಅಸಲು ದಾವಾ ಸಂ: 236/2019ರಲ್ಲಿ ಪ್ರಕರಣವು ಚಾಲ್ತಿಯಲ್ಲಿರುತ್ತದೆ.<br><br>ಸದರಿ ಜಮೀನಿನ ಭೂಪರಿಹಾರ ಕುರಿತು ವಿದ್ಯಾಗಿರಿ ಪೋಲೀಸ್ ಠಾಣೆಯಲ್ಲಿ ಗುನ್ನಾ ನಂ:150/2023ರಂತೆ ದೂರು ದಾಖಲಾಗಿದೆ.</td></tr>
<tr><td>(ಇ)</td><td>ತಹಶೀಲ್ದಾರರವರು ಕೆ.ಐ.ಎ.ಡಿ.ಬಿ. ಯ ಮಾನ್ಯ ಸಹಾಯಕ ಆಯುಕ್ತರಿಗೆ, ಹಣ ಬಿಡುಗಡೆ ಮಾಡುವ ಕುರಿತು, ಮೂಲ</td><td>ಕೆ.ಐ.ಎ.ಡಿ.ಬಿ. ಯ ಸಹಾಯಕ ಆಯುಕ್ತರಿಗೆ ಹಣ ಬಿಡುಗಡೆ ಮಾಡುವ ಕುರಿತು ತಹಶೀಲ್ದಾರ್, ಧಾರವಾಡ ಇವರಿಂದ ಯಾವುದೇ ರೀತಿಯ ಶಿಫಾರಸ್ಸು ವರದಿಯನ್ನು ಕೆಐಎಡಿಬಿಗೆ ಸಲ್ಲಿಸಲಾಗಿರುವುದಿಲ್ಲ.</td></tr>
</table>

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಮಾಲೀಕರನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳ ಪರವಾಗಿ ಶಿಫಾರಸ್ಸು ಮಾಡಿರುವುದು ಮತ್ತು ತಹಶೀಲ್ದಾರ್, ಉಪ ವಿಭಾಗಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಯವರು ಜರುಗಿಸಿದ ಕ್ರಮಗಳು ಸ್ಪಷ್ಟವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಕೈಗೊಂಡ ಕ್ರಮಗಳೇನು;</td><td>ಈ ಕುರಿತು ಸದರಿ ವಿಷಯದ ಕುರಿತು ಉಪ ವಿಭಾಗಾಧಿಕಾರಿ, ಧಾರವಾಡ ಇವರ ಪತ್ರ ಸಂ:ಕೆ.ಎಲ್.ಆರ್/ಎಮ್/ಸಿಆರ್-140/2020-21 ದಿನಾಂಕ:17-06-2022ರನ್ವಯ ವಿವರವಾದ ವರದಿಯನ್ನು ಪ್ರಾದೇಶಿಕ ಆಯುಕ್ತರು, ಬೆಳಗಾವಿ ಇವರಿಗೆ ಸಲ್ಲಿಸಲಾಗಿದೆ.</td></tr>
<tr><td>(ಈ)</td><td>ತಹಶೀಲ್ದಾರವರು ಎಲ್ಲಾ ಮೂಲ ಭೂ ದಾಖಲೆಗಳು, ಮೂಲ ಭೂ ಮಾಲೀಕರ ಪರವಾಗಿದ್ದರೂ ಆರ್.ಟಿ.ಸಿ. ಯಲ್ಲಿ (ಪಾಣಿ ಉದ್ದೇಶ ಪೂರ್ವಕವಾಗಿ ಹೆಸರನ್ನು ಸೇರಿಸದಿರುವುದು ಮತ್ತು ಮೂಲ ಭೂ ಮಾಲೀಕರು ಮಾನ್ಯ ತಹಶೀಲ್ದಾರವರ ಕಚೇರಿಗೆ ಹೆಸರು ಸೇರಿಸಲು ಅನೇಕ ಬಾರಿ ಅರ್ಜಿ ಸಲ್ಲಿಸಿದ್ದರೂ ಕ್ರಮವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಇಟಿಗಟ್ಟಿ ಗ್ರಾಮದ ಸರ್ವೆ ನಂ.10/1ರ ಪೈಕಿ ಕ್ಷೇತ್ರ 04 ಎಕರೆ 39 ಗುಂಟೆ, 01 ಎಕರೆ 27 ಗುಂಟೆ ಹಾಗೂ 01 ಎಕರೆ 27 ಗುಂಟೆ ಸೇರಿಸಿ ಒಟ್ಟು ಕ್ಷೇತ್ರ 08 ಎಕರೆ 12 ಗುಂಟೆ ಜಮೀನನ್ನು ಎಮ್.ಆರ್. ನಂ.58/2010-11 ದಿನಾಂಕ:15-02-2011ರ ಪ್ರಕಾರ ಕೆ.ಎಲ್.ಆರ್ "ಸರಕಾರ" ಎಂದು ಪಹಣಿ ಪತ್ರಿಕೆಯ ಕಾಲಂ ನಂ.09ರಲ್ಲಿ ದಾಖಲಿಸಿರುವುದರಿಂದ ಈ ಕುರಿತು ಸಕ್ಷಮ ಅಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಿ ಸೂಕ್ತ ಪರಿಹಾರ ಕಂಡುಕೊಳ್ಳಲು ಅರ್ಜಿದಾರರಿಗೆ ದಿನಾಂಕ:22-10-2024ರಂದು ತಹಶೀಲ್ದಾರ್, ಧಾರವಾಡ ಇವರು ತಿಳುವಳಿಕೆ ಪತ್ರವನ್ನು ನೀಡಿರುತ್ತಾರೆ.</td></tr>
<tr><td>(ಉ)</td><td>ಪ್ರಾದೇಶಿಕ ಆಯುಕ್ತರು, ಬೆಳಗಾವಿ ಜಿಲ್ಲಾಧಿಕಾರಿಯವರು ಧಾರವಾಡ ಇವರುಗಳು ಮೂಲ ಭೂ ಮಾಲೀಕರಿಗೆ ಸ್ವಾಧೀನ ಪರಿಹಾರ ಧನ ವಿತರಿಸದೆ ಬೇರೆಯವರಿಗೆ ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ವಿಶೇಷ ಭೂಸ್ವಾಧಿನಾಧಿಕಾರಿ, (ಕೆಐಎಡಿಬಿ) ಧಾರವಾಡ ಇವರ ಕಾರ್ಯಾಲಯದಿಂದ ಈ ಕೆಳಕಂಡ ಭೂ ಮಾಲಿಕರಿಗೆ ಭೂ ಪರಿಹಾರ ಧನವನ್ನು ವಿತರಿಸಲಾಗಿರುತ್ತದೆ.<br><table>
<tr><th>ಭೂಪರಿಹಾರ ಪಡೆದವರ ಹೆಸರು</th><th>ಕ್ಷೇತ್ರ<br>(ಎ-ಗು-ಆ)</th></tr>
<tr><td>1. ಶ್ರೀಮತಿ ಬಸವ್ವ ನಿಂಗಪ್ಪ ಗಾಮನಗಟ್ಟಿ</td><td>05-00-00</td></tr>
<tr><td>2. ಶ್ರೀ ರಮೇಶ ತಂದೆ ಸಿದ್ದಪ್ಪ ಗುಳಗಣ್ಣವರ</td><td>05-00-00</td></tr>
<tr><td>3. ಶ್ರೀ ಬಸಪ್ಪ ಪೂಜಾರ, ರಾಯಪ್ಪ ಪೂಜಾರ ಹಾಗೂ ಮುದಕಪ್ಪ ಪೂಜಾರ</td><td>01-27-00</td></tr>
<tr><td>4. ಶ್ರೀ.ತುಕಾರಾಮ ಬಿ ಪೂಜಾರ, ಕರೆಪ್ಪ ಬಿ ಪೂಜಾರ, ರಾಮಪ್ಪ ಬಿ ಪೂಜಾರ ಹಾಗೂ ಫಕ್ಕೀರಪ್ಪ ಬಿ ಪೂಜಾರ</td><td>08-12-00</td></tr>
<tr><td>ಒಟ್ಟು ಕ್ಷೇತ್ರ</td><td>19-39-00</td></tr>
</table></td></tr>
<tr><td>(ಊ)</td><td>ಮಾನ್ಯ ತಹಶೀಲ್ದಾರವರು ಆರ್.ಟಿ.ಸಿ. ಯ ಕಲಂ 9 ರಲ್ಲಿ ದಾಖಲು ಇದ್ದ ಮತ್ತು ದಾಖಲು ಮಾಡಬಹುದಾದ ರೈತರ ಹೆಸರನ್ನು ಯಾವುದೇ ಸರ್ಕಾರದ ಹಾಗೂ ನ್ಯಾಯಾಲಯದ ಆದೇಶ ಇಲ್ಲದಿದ್ದರೂ ಆರ್.ಟಿ.ಸಿ.ಯ ಕಾಲಂ ನಂ.12/2 ರಲ್ಲಿ ದಾಖಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ದಲಿತರ ಭೂಮಿಯನ್ನು ಆರ್.ಟಿ.ಸಿ. ಯಲ್ಲಿ (ಪಾಣಿ ಸರ್ಕಾರ, ಕೆ.ಎಲ್.ಆರ್. ಸರ್ಕಾರವೆಂದು ನಮೂದು ಮಾಡಲು ಸರ್ಕಾರದ ಅಥವಾ ನ್ಯಾಯಾಲಯದ ಆದೇಶವಿದೆಯೇ ? (ಇದ್ದರೆ ಆದೇಶ ಪ್ರತಿ ನೀಡುವುದು)</td><td>ಆರ್.ಟಿ.ಸಿ. ಯ ಕಲಂ 9 ರಲ್ಲಿ ದಾಖಲು ಇದ್ದ ಮತ್ತು ದಾಖಲು ಮಾಡಬಹುದಾದ ರೈತರ ಹೆಸರನ್ನು ಯಾವುದೇ ಸರ್ಕಾರದ ಹಾಗೂ ನ್ಯಾಯಾಲಯದ ಆದೇಶ ಇಲ್ಲದಿದ್ದರೂ ಆರ್.ಟಿ.ಸಿ.ಯ ಕಲಂ ನಂ.12/2ರಲ್ಲಿ ತಹಶೀಲ್ದಾರ್ ರವರು ದಾಖಲು ಮಾಡಿರುವುದಿಲ್ಲ ಹಾಗೂ ಆರ್.ಟಿ.ಸಿ.ಯ ಕಲಂ 9ರಲ್ಲಿ ದಾಖಲಿದ್ದ ಹೆಸರುಗಳು ತಂತ್ರಾಂಶದ ಮೂಲಕ ತನ್ನಿಂತಾನೆ ಕಲಂ 12/2 ರಲ್ಲಿ ಕಾಣುತ್ತವೆ.</td></tr>
</table>

**ಸಂ: ಕಂಇ 93 ಟಿಆರ್‌ಎಂ 2025 (1723339)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು